ಪ್ರೀತೀಶ್, ಸಿದ್ದಾಪುರ
ತುಂಬು ಬಟ್ಟೆಗಿಂತ ತುಂಡುಬಟ್ಟೆಗೆ ಏಕೆ ಬೆಲೆ ಜಾಸ್ತಿ?




ಪೂರ್ತಿ ಚಿಕ್ಕದಾದುದು ಕೀರ್ತಿ ದೊಡ್ಡದು!

ಶಿವಮೊಗ್ಗ ರಮೇಶ್, ಮೈಸೂರು
ದೇವರಿಗೆ ಪ್ರದಕ್ಷಿಣೆ ಹಾಕಿ ನಮಸ್ಕಾರ ಮಾಡುವುದರ ಉದ್ದೇಶವೇನು ಸರ್?
ಅದೂ ಸರ್ಕಾರಿ ಪದ್ಧತಿಯಂತೆ. ಸುತ್ತೋ-ಲೆ(ಾ) ಯಾದನಂತರವೇ ಕಾರ್ಯಾಚರಣೆ.

ಆರ್.ಕೆ. ಹಾದಿಮನಿ, ಧಾರವಾಡ
ಐಪಿಎಸ್ ಅಧಿಕಾರಿಗೆ 220 ಉಳಿತಾಯ ಖಾತೆ, ಪಂಚಾಯ್ತಿ ಅಧ್ಯಕ್ಷರಿಗೆ 3 ಲಕ್ಷ ಲಂಚ; ದೇವರೇ ಬಂದರೂ ದೇಶರಕ್ಷಣೆ ಅಸಾಧ್ಯವಲ್ಲವೇ ರಾಮ್?
ಅದಕ್ಕೇ ಭಗವಂತನೂ ಆಜ್ ಕಾ ಅಲ್ಲದೆ ಕಲ್ ಕೀ ಅಂತೆ! ಇದು ಹತ್ತಲ್ಲ-ಹರಿಯಲ್ಲ ಎಂದು ಹತ್ತವತಾರ ತಳೆದ ಅವನಿಗೆ ತಿಳಿಯದೇ...!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ವಾಚಾಮಗೋಚರ ಎಂದರೇನು?



ವಿರೋಧಪಕ್ಷದವರು ಆಡಳಿತ ಪಕ್ಷದವರನ್ನು ಸಂಬೋಧಿಸಲು ಉಪಯೋಗಿಸುವ ಭಾಷೆ.

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
ಸತ್ಯಕ್ಕೂ, ಸುಳ್ಳಿಗೂ ಎಷ್ಟು ದೂರ?
ನ್ಯಾಯದೇವತೆಗೂ, ನ್ಯಾಯವಾದಿಗೂ ಇರುವಷ್ಟೇ!

ಮಾಲತಿರಾಜು, ಬೆಂಗಳೂರು
ರಾಮ್‌ಜಿ, ನೀವು ಉತ್ತರಿಸಲಾಗದೇ ಇರುವಂತಹ ಪ್ರಶ್ನೆ ಯಾವುದು?
ಯಾವುದೇ ಅಶ್ಲೀಲ, ಅಸಭ್ಯ, ಅಸಹ್ಯ ಪ್ರಶ್ನೆಯಾಗಬಹುದು.

ಹಾಡ್ಯ ಜಯಾನಂದ, ಮೈಸೂರು
ಮದುವೆ ಎಂಬುವ ಸಂಪ್ರದಾಯ ಇಲ್ಲದಿದ್ದರೆ ಏನಾಗುತ್ತಿತ್ತು?
ಡೈವೋರ್ಸ್ ಎಂಬ ದುಷ್ಟಸಂಪ್ರದಾಯ ಇಲ್ಲವಾಗುತ್ತಿತ್ತು.

ರಾಜೀವ್ ಕುಮಾರ್ ಪೂಜಾರ, ಮಾಗಳ
ನಿಮ್ಮ ಪ್ರಕಾರ ಶ್ರೇಷ್ಠ ದಾನ ಯಾವುದು?
ಯೋಗ್ಯರಿಗೆ ಮತದಾನ.

ಹೇಮಾ ಕೆ, ಬೆಂಗಳೂರು
ಹುಡುಗರು ಬೈಕನ್ನು ವೇಗವಾಗಿ ಓಡಿಸುವುದು ಯಾವಾಗ, ನಿಧಾನವಾಗಿ ಓಡಿಸುವುದು ಯಾವಾಗ?
ಹುಡುಗಿ ಹಿಂದೆ ಕುಳಿತಿದ್ದಾಗ ವೇಗ, ಹುಡುಗಿಯರ ಕಾಲೇಜ್ ಮುಂದೆ ಬಂದಾಗ ನಿಧಾನ!

ಮಲ್ಲಿಕಾರ್ಜುನ ಬಗಲಿ, ಗಿರಗಾಂವ
ದೇಹ ಮಾರಿಕೊಂಡರೆ ವಾರಾಂಗನೆ, ಮನಸ್ಸನ್ನು ಮಾರಿಕೊಂಡರೆ?
ಸಾರಿ! ಮನಸ್ಸು ಎಂದಿಗೂ ಮಾರಲಾಗದ ವಸ್ತು; ಹೆಚ್ಚೆಂದರೆ ಅದನ್ನು ನೀಡಬಹುದಷ್ಟೆ – ಅದೂ ಪ್ರೀತಿಯಿಂದ ಮಾತ್ರ!

ಎಂ.ಜೆ.ರಾಜಶೇಖರರೆಡ್ಡಿ, ದೊಡ್ಡಬಳ್ಳಾಪುರ
ಯಾರ‍್ಯಾರದೋ ವರದಿಗಳಿಗೆ ಯಾರೋ ಸಂಪಾದಕರಾಗೋದು ಹೆಚ್ಚುಗಾರಿಕೆಯೇ?
ಆ ವರದಿ ರದ್ದಿಯಾಗದೆ ಸುದ್ದಿಯಾಗುವತ್ತ ಪಾದ ಇಡಲು ಸಂಪಾದಕ ಬೇಕು ರೆಡ್ಡಿಗಾರು!

ವಿ.ಹೇಮಂತಕುಮಾರ್, ಬೆಂಗಳೂರು
ಮೊಗ್ಗಿನ ಜಡೆಗಳೇ ಕಾಣುತ್ತಿಲ್ಲವಲ್ಲಾ..?
ಇದೆಯಲ್ಲ! ಮೊಗ್ಗು ವಿದೇಶದಲ್ಲಿ, ಜಡೆ ಬ್ಯೂಟಿಷಿಯನ್‌ನ ಕತ್ತರಿಯಲ್ಲಿ!

ರವಿಭಟ್, ಬೆಂಗಳೂರು
ಮನಸ್ಸು ಶ್ರೀಮಂತಿಕೆಯಿಂದ ತುಂಬಿ ತುಳುಕಾಡಲು ಏನು ಮಾಡಬೇಕು?
ಬೆಳಗೆರೆ ಕೃಷ್ಣಶಾಸ್ತ್ರಿಗಳಂತಹ ಶ್ರೇಷ್ಠರೊಡನೆ ಕೊಂಚ ಕಾಲ ಕಳೆಯಬೇಕು.

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
ಹೆಣ್ಣಿಗೆ ಗುಣ ಮತ್ತು ಸೌಂದರ್ಯವಿದ್ದು, ಅದೃಷ್ಟ ಇಲ್ಲದಿದ್ದರೆ?
ಶೋಭಾ ಕರಂದ್ಲಾಜೆಯಂತೆ ಅನ್ಯಾಯವಾಗಿ ಮೂಲೆಗುಂಪಾಗುತ್ತಾರೆ.

## ಬಹುಮಾನಿತ ಪ್ರಶ್ನೆ

ಎಂ.ಕೆ.ರವಿಕಾಂತ, ತುಮಕೂರು
ಜನಪ್ರಿಯ ಶಾಸಕರು ಎಂದು ಎಂ.ಎಲ್.ಎಗಳು ತಮ್ಮ ಹೆಸರಿನ ಜೊತೆ ಸೇರಿಸಿಕೊಳ್ಳುವುದೇಕೆ?
ಮೋದಕಪ್ರಿಯ ಎಂದರೆ ಕಡುಬನ್ನು ಕಬಳಿಸುವವನು; ಜನಪ್ರಿಯ ಎಂದರೆ.... ಸರಿಯಾಗೇ ಇದೆಯಲ್ಲಾ!

ಕೆ.ಜಿ. ಶೇಖರಪ್ಪ, ಚಿತ್ರದುರ್ಗ
ಸಣ್ಣ ವಿಷಯವನ್ನು ದೊಡ್ಡ ವಿಷಯವನ್ನಾಗಿ ಮಾಡುವ ಬುದ್ಧಿವಂತರಿಗೆ ನಿಮ್ಮ ಸಲಹೆ ಏನು ಸ್ವಾಮಿ?
ಸಣ್ಣ ಉಳಿತಾಯ ಯೋಜನಾ ಮಂಡಳಿಯ ಮುಖಂಡರಾಗಿರಿ; ಯೋಜನೆ ದೊಡ್ಡದಾಗಿ ಅನುಕೂಲವಾದೀತು.

ಎಂ.ಎನ್. ಸೋಮಶೇಖರ್, ಮೈಸೂರು
ಸರ್ಜನ್‌ಗೆ ಹದ್ದಿನಂತಹ ಕಣ್ಣುಗಳೂ, ಹೆಂಗಸಿನಂತಹ ಕೈಗಳೂ, ಸಿಂಹದಂತಹ ಹೃದಯವೂ, ವಕೀಲನಂತಹ.....?
ಜೇಬು!

ಎಚ್.ಆರ್. ದೇಸಾಯಿ, ರಾಯಚೂರು
ಶ್ರೀಮಂತನಿಗೆ ಏನು ಖರೀದಿಸಲು ಸಾಧ್ಯವಿಲ್ಲ? ಬಡವನಿಗೆ ಏನು ಮಾರಲು ಸಾಧ್ಯವಿಲ್ಲ?
ಆಯಸ್ಸನ್ನು, ಬಡತನವನ್ನು!

ಎಂ.ಬಿ. ಖೋದಾನಪುರ, ಸವದತ್ತಿ
ಪ್ರೇಮಿಸುವುದು ಒಂದು ಕಲೆ; ಆದರೂ ಜನರು ಪ್ರೇಮಿಗಳನ್ನು ದ್ವೇಷಿಸುವರೇಕೆ?



ತಮಗೆ ಆ ಭಾಗ್ಯವಿರಲಿಲ್ಲವಲ್ಲಾ ಎಂಬ ಹತಾಶೆ

ಕುಂಬಳೆ ಲಕ್ಷ್ಮೀನಾರಾಯಣ, ಬೆಂಗಳೂರು
ರಾಜಕಾರಣಿಗಳಲ್ಲಿ ಸಾತ್ವಿಕತೆ ಇದೆಯೇ?
ಸಾತ್ವಿ ಬಿಡಿ, ಕತೆಯಂತೂ ಇದೆ.

ಪಿ.ಎನ್.ಶ್ರೀವತ್ಸ, ಬೆಂಗಳೂರು
ಒಂದು ಅಂದಾಜಿನ ಪ್ರಕಾರ ಬೆಂಗಳೂರು ನಗರ ಒಂದರಲ್ಲೇ 10 ಸಾವಿರಕ್ಕೂ ಹೆಚ್ಚು ಡೈವೋರ್ಸ್ ಕೇಸುಗಳು?
ವೆರಿಗುಡ್. ಬೆಂಗಳೂರಿಗೆ ಡೈವೋರ್ಸಿಗಳ ಸ್ವರ್ಗ ಎಂಬ ಇನ್ನೊಂದು ಬಿರುದು ಬಂದಂತಾಯಿತು!

■ ರಾಮ್